**CC 181/2017**

**ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 181/2017

**ಸಿ ಡಬ್ಲೂ** 1

**ಪಿ ಡಬ್ಲೂಃ** 1

ಸಾಕ್ಷಿಯ ಹೆಸರು - ಶ್ರೀಧರ ದೊಡ್ಡಿ

ತಂದೆಯ ಹೆಸರು - ಲೇಟ್ ನಾಗಪ್ಪ ದೊಡ್ಡಿ

ವಯಸ್ಸು - **61** ವರ್ಷಗಳು

ಉದ್ಯೋಗ - ನಿವೃತ್ತ ಡಿ ವಾಯ್ ಎಸ್ ಪಿ ಬಳ್ಳಾರಿ

ವಾಸಸ್ಥಳ - ಬಳ್ಳಾರಿ

**ಸಾಕ್ಷಿಯನ್ನು ದಿನಾಂಕಃ** 26-09-2022 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ**

ನಾನು ದಿನಾಂಕಃ **12-09-2013** ರಿಂದ **09-07-2016** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **09-06-2016** ರಂದು ಸಾಯಂಕಾಲ **06.00** ಗಂಟೆಗೆ ಠಾಣೆಯಲ್ಲಿದ್ದಾಗ ಬಳ್ಳಾರಿ ಎಸ್.ಪಿ. ಯವರಿಂದ ಒಂದು ಅರ್ಜಿ ಆದೇಶ ಆಗಿದ್ದು, ಅದನ್ನು ವಿಚಾರ ಮಾಡಿ ವರದಿ ನೀಡಬೇಕೆಂದು ಆದೇಶ ಇದ್ದು, ಅದರ ಪ್ರಕಾರ ನಾನು ಎಸ್ ಆರ್ ನಗರದ **18** ನೇ ವಾರ್ಡ್‌ಗೆ ವಿಚಾರಣೆಗೆ ಆರೋಪಿಯ ಮನೆಗೆ ಹೋಗಿರುತ್ತೇನೆ.

ಈ ಪ್ರಕರಣದಲ್ಲಿ ಆರೋಪಿ 2014 ರಲ್ಲಿ ಪಾಸ್ ಪೋರ್ಟ ಪಡೆದದ್ದು, ಪಾಸ್ ಪೋರ್ಟ ಪಡೆಯುವ ಸಮಯದಲ್ಲಿ ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ತನ್ನ ಜನನ ಪ್ರಮಾಣ ಪತ್ರ ಸಲ್ಲಿಸುವ ಮೊದಲು ತನ್ನ ಅಣ್ಣ ಎಜಾಜ್ ಅಹ್ಮದ್ ನ ದಾಖಲೆಯನ್ನು ಸಲ್ಲಿಸಿರುತ್ತಾನೆ.

ನಾನು ಸ್ಥಳದಲ್ಲಿ ಆರೋಪಿಯ ಜನನ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಎಲ್ಲಾ ನೋಡಿ ವಿಚಾರಣೆ ಮಾಡಿ ಅವೆಲ್ಲಾ ಸುಳ್ಳು ಅಂತಾ ಗೊತ್ತಾಯಿತು. ಆರೋಪಿ  ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ತನ್ನ ದಾಖಲೆಗಳನ್ನು ಸಲ್ಲಿಸುವ ಬದಲು ತನ್ನ ಅಣ್ಣನ ದಾಖಲೆ ಸಲ್ಲಿಸಿರುತ್ತಾನೆ ಅಂತಾ ಖಚಿತ ವಾದ ಮೇಲೆ ಅದೇ ದಿನ ಠಾಣೆಗೆ ಬಂದು ಗುನ್ನೆ ನಂ. 125/2016 ರಂತೆ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ. ವರದಿ ಸಲ್ಲಿಸಿರುತ್ತೇನೆ.

ನಾನು ನೀಡಿದ ವರದಿಯನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಅಂತಾ ಗುರುತಿಸಲಾಯಿತು. ಪ್ರ.ವ. ವರದಿಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 (ಎ) ಅಂತಾ ಗುರುತಿಸಲಾಯಿತು.

ದಿಃ 11-06-2016 ಕ್ಕೆ ಬೆಳಿಗ್ಗೆ 10-00 ರಿಂದ 11-00 ಗಂಟೆಗೆ ತನಕ ಠಾಣೆಯಲ್ಲಿ 1ನೇ ಆರೋಪಿಯನ್ನು ಕರೆಸಿ ಆತನು ಹಾಜರುಪಡಿಸಿದ ದಾಖಲೆಗಳನ್ನು ಪಂಚರ ಸಮಕ್ಷಮ ಠಾಣೆಯಲ್ಲಿ ಜಪ್ತಿ ಮಾಡಿರುತ್ತೇನೆ.

ಈ ಸಮಯದಲ್ಲಿ ಆರೋಪಿಯ ಆಧಾರ ಕಾರ್ಡ ನಂ. 372534220271 ಮತ್ತು ಇದೇ ಆರೋಪಿಯ ಓರಿಯಂಟಲ್ ಬ್ಯಾಂಕ್ ಪಾಸ್ ಬುಕ್ ಅಕೌಂಟ್ ನಂ. 1298212100577З, ಜನನ ಪ್ರಮಾಣಪತ್ರ,

ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ, ರೂಲ್ ನಂ. 20100107165, ಇವುಗಳನ್ನು ಪಂಚನಾಮೆ ಪ್ರಕಾರ ವಶಪಡಿಸಿಕೊಂಡು ಪಿ.ಎಫ್. ಗೆ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿರುತ್ತೇನೆ.

ಸದರಿ ಪಂಚನಾವೆಯನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3 (ಎ) ಅಂತಾ ಗುರುತಿಸಲಾಯಿತು. ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಬಾಂಡ್ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಸಾಕ್ಷಿ ದಾರರನ್ನು ವಿಚಾರಣೆ ಮಾಡಿ ಚಾಸಾ - 4 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ ಪಾಸ್ ಪೋರ್ಟ ಕಚೇರಿಯಿಂದ ಬಂದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪಾಸ್ ಪೋರ್ಟ ಕಚೇರಿಯಿಂದ ಬಂದ ಪತ್ರವನ್ನು ನಿಪಿಃ 4 ಎಂದು, ದಿಃ 31-05-2016 ರ ಪಾಸ್ ಪೋರ್ಟ ಕಚೇರಿಯ ಅರ್ಜಿಯನ್ನು ನಿಪಿಃ 5 ಎಂದು, ಅದರೊಂದಿಗಿರುವ ದಾಖಲೆಗಳನ್ನು ಲಿಟ್ಲ ಪ್ಲಾವರ್ ಶಾಲೆ ನೀಡಿದ ಪ್ರಮಾಣಪತ್ರವನ್ನು ನಿಪಿಃ 6 ಎಂದು, ಆರೋಪಿಯ ಪಿ ವಿ ಎಸ್ ಬಿ ಎಸ್ ಶಾಲೆಯ ಪ್ರವೇಶ ಪತ್ರವನ್ನು ನಿಪಿಃ 7 ಎಂದು, ವರ್ಗಾವಣೆ ಪ್ರಮಾಣ ಪತ್ರದ ಪ್ರತಿಯನ್ನು ನಿಪಿಃ 8 ಎಂದು, ಆರೋಪಿಯ ಶಾಲೆಯ ಅಂಕಪಟ್ಟಿಯನ್ನು ನಿಪಿಃ 9 ಎಂದು, ಎಸ್ ಎಸ್ ಎಲ್ ಸಿ ಯ ಫಲಿತಾಂಶವನ್ನು ನಿಪಿಃ 10 ಎಂದು, ಶಾಲೆಯವರು ನೀಡಿದ ಆರೋಪಿಯ ಅಣ್ಣನ ಪ್ರಮಾಣಪತ್ರವನ್ನು ನಿಪಿಃ 11 ಎಂದು, ಆರೋಪಿಯ ಅಣ್ಣನ ವರ್ಗಾವಣೆ ಪ್ರಮಾಣ ಪತ್ರವನ್ನು ನಿಪಿಃ 12 ಎಂದು, ವಿನಾಯಕ ಸರಸ್ವತಿ ಶಾಲೆಯವರು ನೀಡಿದ ಆರೋಪಿಯ ಅಣ್ಣನ ಪ್ರಮಾಣ ಪತ್ರವನ್ನು ನಿಪಿಃ 13 ಎಂದು, ಆರೋಪಿಯ ಅಣ್ಣನ ಪ್ರವೇಶ ಪತ್ರವನ್ನು

ನಿಪಿಃ 14 ಎಂದು, ಡಿ ಎಸ್ ಬಿ ಘಟಕ ಬಳ್ಳಾರಿಯವರಿಂದ ಬಂದ ಆರೋಪಿಯ ದಾಖಲೆಗಳನ್ನು ಪರಿಶೀಲನೆ ಮಾಡಲು ಬಂದ ಪತ್ರವನ್ನು ನಿಪಿಃ 15 ಎಂದು, ಆರೋಪಿಯ ಅರ್ಜಿಯನ್ನು ನಿಪಿಃ 16 ಎಂದು, ಆರೋಪಿಯ ಅಣ್ಣನ ಆಧಾರ ಕಾರ್ಡ ನ್ನು ನಿಪಿಃ 17 ಎಂದು, ಆರೋಪಿಯ ಅಣ್ಣನ ಜನನ ಪ್ರಮಾಣಪತ್ರ ನಿಪಿಃ 18 ಎಂದು ಗುರುತಿಸಲಾಯಿತು.

ದಸ್ತಗಿರಿ ಮಾಡಿದ ಆರೋಪಿ ಈಗ ನ್ಯಾಯಾಲಯದ ಮುಂದೆ ಇದ್ದಾನೆ. ಮುಂದಿನ ತನಿಖೆಯನ್ನು ಚಾಸಾ - 15 ರವರು ಮಾಡಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಪಿ ವಾಯ್ ವಕೀಲರಿಂದಃ**

ನನಗೆ ಪಾಸ್ ಪೋರ್ಟ ನೀಡಿದ ರದ್ದು ಗೊಳಿಸಲು ಅರ್ಜಿ ಬಂದಿರುತ್ತದೆ ಅಂದರೆ ಸರಿಯಲ್ಲ. ಆರೋಪಿ ಅಣ್ಣನ ಪಾಸ್ ಪೋರ್ಟ ನೀಡಲಾಗಿತ್ತು ಅಂದರೆ ನನಗೆ ಗೊತ್ತಿಲ್ಲ. ಯಾವುದೇ ವ್ಯಕ್ತಿಗೆ ಪಾಸ್ ಪೋರ್ಟ ನೀಡಬೇಕಾದರೆ ನಮ್ಮ ಪರಿಶೀಲನೆ ಮೇಲೆ ನೀಡಿರುತ್ತಾರೆ ಅಂದರೆ ಸರಿ.

ಈ ಪ್ರಕಣದಲ್ಲಿ ಆರೋಪಿಯ ಪಾಸ್ ಪೋರ್ಟ ಪರಿಶೀಲನೆಗೆ ಬಂದಿಲ್ಲ ಆದರೆ, ಸರ್ಕಾರಕ್ಕೆ ಮೋಸ ಮಾಡಿ ಪಾಸ್ ಪೋರ್ಟ ಪಡೆಯಲಾಗಿದೆ ಅಂತಾ ತನಿಖೆಗೆ ಬಂದಿರುತ್ತದೆ. ನಿಪಿಃ 5 ನ್ನು ನಾನೇ ಸಲ್ಲಿಸಿರುತ್ತೇನೆ. ನಿಪಿಃ 5 ರ ಪ್ರಕಾರ ಮೊದಲು ಆರೋಪಿಯ ಅಣ್ಣನ ಬಳಿ ಪಾಸ್ ಪೋರ್ಟ ಇತ್ತು ಅಂದರೆ ನನಗೆ ಗೊತ್ತಿಲ್ಲ. ನಿಪಿಃ 2 ರಲ್ಲಿ ಆರೋಪಿಯ ಅಣ್ಣ ನ ವಿಳಾಸ ಇದೆ. ಪಾಸ್ ಪೋರ್ಟ ಹೇಗೆ ನೀಡುತ್ತಾರೆ ಅಂತಾ ನನಗೆ ಮಾಹಿತಿ ಇದೆ.

ನಿಪಿಃ 5 ರ ಪ್ರಕಾರ ಆರೋಪಿ ಅಣ್ಣನ ಬಳಿ ಮೊದಲೇ ಪಾಸ್ ಪೋರ್ಟ ಇತ್ತು ಅಂದರೆ ನನಗೆ ಗೊತ್ತಿಲ್ಲ.

ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಮುಂದಿನ ಪಾಟೀ ಸವಾಲು ಮಧ್ಯಾಹ್ನ **03.00** ಗಂಟೆಗೆ ಮುಂದೂಡಲಾಯಿತು.

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.

**ಸಾಕ್ಷಿಯು ದಿನಾಂಕಃ** 22-08-2022 **ರಂದು ಪುನಃ ಮಧ್ಯಾಹ್ನ** 03.00 **ಗಂಟೆಗೆ ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು**.

**<u>ಪಾಟೀ ಸವಾಲುಃ ಶ್ರೀ ಸಿ ಪಿ ವಾಯ್ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲಾ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.